# ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್

### ಗೇಥರ್ಸ್‌ಬರ್ಗ್, ಮೆರಿಲ್ಯಾಂಡ್, ಅಮೆರಿಕ

## ಮನ ಮೆಚ್ಚುವ ರೀತಿಯಲ್ಲಿ ಬದುಕಬೇಕು

ಪ್ರತಿಯೊಬ್ಬರೂ ಅವರ ಮನಸ್ಸು ಮೆಚ್ಚುವಂತೆ ಬದುಕಬೇಕು ಎಂದು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸೆಪ್ಟೆಂಬರ್ 19ರಂದು ಅಮೆರಿಕದ ವರ್ಜಿನಿಯಾದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಜನಪದರು ಆಚಾರ ಮತ್ತು ನೀತಿಗಳಿಂದ ಜಗತ್ತಿನಲ್ಲಿ ಜ್ಯೋತಿಯಂತೆ ಬಾಳಬೇಕು ಆಶಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಅಗತ್ಯವಾದ ಸಂಸ್ಕಾರ, ಸಂಸ್ಕೃತಿ, ಉತ್ತಮ ಶಿಕ್ಷಣವನ್ನು ನೀಡಬೇಕಾದುದು ಅಗತ್ಯ. ದುಡಿಮೆ ಮತ್ತು ಧಾರ್ಮಿಕತೆಗಳನ್ನು ಜೀವನದಲ್ಲಿ ಸರಿದೂಗಿಸಿಕೊಂಡು ಹೋಗಬೇಕು. ಜೀವನದಲ್ಲಿ ಎಲ್ಲ ಕರ್ತವ್ಯಗಳು, ಸುಖ ಸೌಲಭ್ಯಗಳನ್ನು ಅನುಭವಿಸುವುದರ ಜೊತೆಗೆ ಧಾರ್ಮಿಕತೆಯನ್ನು ಸದಾ ಅಳವಡಿಸಿಕೊಳ್ಳಬೇಕು. ನಡೆನುಡಿಗಳಲ್ಲಿ ಸಂಯೋಗವಿರಬೇಕು. ಅಮೆರಿಕದಲ್ಲಿ ಎಲ್ಲಿಯೇ ಕನ್ನಡಿಗರ ಕಾರ್ಯಕ್ರಮಗಳನ್ನು ಆಯೋಜಿಸಿದರು ಕರ್ನಾಟಕದ ಎಲ್ಲ ಭಾಗಗಳವರೂ ಒಟ್ಟಾಗಿ ಭಾಗವಹಿಸುವುದು ಕನ್ನಡಿಗರ ತಾಯ್ನಾಡಿನ ಅಭಿಮಾನವನ್ನು ಬಿಂಬಿಸುತ್ತದೆ ಎಂದು ಹೇಳಿದರು.

ಶ್ರೀ ಜಗದೀಶ್ ಮತ್ತು ಶ್ರೀಮತಿ ಮಮತರವರ ನಿವಾಸದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀ ಸಂಜಾತ್ ಸೂಲಕುಂಟೆಯವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ ಚಟುವಟಿಕೆಗಳು ಹಾಗೂ ದೇವಾಲಯ ಸಂಕೀರ್ಣದ ವಿವರಗಳನ್ನು ನೀಡಿದರು. ಕು. ತ್ರಿಷಿಕ ಜಗದೀಶ್ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಲೋಕೇಶ್ ಗುರುಮಲ್ಲಯ್ಯ ಹಾಗೂ ಶ್ರೀ ಜಯಂತ್‌ರವರು ವಚನಗಾಯನ ಮಾಡಿದರು. ಶ್ರೀ ಲೋಕೇಶ್ ಗುರುಮಲ್ಲಯ್ಯ ಕಾರ್ಯಕ್ರಮ ನಿರೂಪಿಸಿದರು.




ಅಮೆರಿಕದ ವರ್ಜಿನಿಯಾದ ಶ್ರೀ ಜಗದೀಶ್ ಮತ್ತು ಶ್ರೀಮತಿ ಮಮತರವರ ನಿವಾಸದಲ್ಲಿ ಸೆಪ್ಟೆಂಬರ್ 19ರಂದು ಪೂಜ್ಯ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದ್ದ ಸತ್ಸಂಗದಲ್ಲಿ ಶ್ರೀ ಲೋಕೇಶ್ ಗುರುಮಲ್ಲಯ್ಯನವರು ಮಾತನಾಡುತ್ತಿರುವುದು ಸಭೆಯಲ್ಲಿ ಭಾಗವಹಿಸಿದ್ದ ಕೆಲವರು ಪೂಜ್ಯರ ಆಶೀರ್ವಾದ ಪಡೆದರು.